ದಿನಾಂಕಃ22/04/2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ,
ಮುಖ್ಯವಿಚಾರಣೆಃ ಪ್ರತಿವಾದಿ ಪರ ಶ್ರೀ.ಡಿ.ಕೆ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ, ಅದರಲ್ಲಿ ಹೇಳಿ ಬರೆಸಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ದಿನಾಂಕಃ27.02.2004 ರ ನನ್ನ ಹೆಸರಿನಲ್ಲಿರುವ ದಾವಾ ಆಸ್ತಿ ಸರ್ವೇ ನಂಬರ್ 28 ವಿಸ್ತೀರ್ಣ 1 ಎಕರೆ 27 ಗುಂಟೆ ಜಮೀನಿನ ಖರೀದಿ ಪತ್ರದ ದೃಢೀಕೃತ ನಕಲು ಹಾಜರ್ ಮಾಡಿದ್ದೇನೆ, **ಸದರಿ ದಾಖಲೆಯನ್ನು ವಾದಿ ಪರ ವಕೀಲರ ತಕರಾರಿಗೊಳಪಟ್ಟು** ಹಾಗೂ ಸಾಕ್ಷಿದಾರರು ಮೂಲ ಖರೀದಿ ಪತ್ರ ಕಳೆದುಹೋಗಿದೆ ಎಂದು ನುಡಿದ ಕಾರಣ ನಿ.ಡಿ.15 ಎಂದು ಗುರುತಿಸಲಾಯಿತು. ನಿ.ಡಿ.1 ರಿಂದ ನಿ.ಡಿ.14 ದಾಖಲೆಗಳನ್ನು ಸಾಕ್ಷಿದಾರರು ತಮ್ಮ ಪರ ಅಳವಡಿಸಿಕೊಳ್ಳುತ್ತಾರೆ.

**ಪಾಟೀ ಸವಾಲುಃ** ವಾದಿ ಪರ ಶ್ರೀ.ಎಸ್.ಆರ್.ಬಿ. ವಕೀಲರಿಂದಃ

ನನ್ನ ಅಣ್ಣ ತಮ್ಮಂದಿರ ಪೈಕಿ ನಾರಾಯಣಸ್ವಾಮಿ 1ನೇ ಪ್ರತಿವಾದಿ ದೊಡ್ಡವರು ಎಂದರೆ ಸರಿ. ದೊಡ್ಡವರಾದ ಕಾರಣ ನಮ್ಮ ಕುಟುಂಬದ ಯಜಮಾನಿಕೆ ನಾರಾಯಣಸ್ವಾಮಿ ಮಾಡುತ್ತಿದ್ದರು ಎಂದರೆ ಸರಿ. ನಾವು ಒಟ್ಟಾಗಿ ಇದ್ದಾಗ ಸಾಕಷ್ಟು ಬ್ಯಾಂಕ್ ಗಳಲ್ಲಿ ಸಾಲ ಪಡೆದಿದ್ದೆವು ಎಂದರೆ ಸರಿ. ನಿ.ಪಿ.48 ದಾಖಲೆಯ ಒಂದು

ಫೋಟೋವನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸದರಿ ಫೋಟೋ ತನ್ನದೇ ಎಂದು ಸಾಕ್ಷಿ ಗುರುತಿಸಿದ ಕಾರಣ ಸದರಿ ಫೋಟೋವನ್ನು ನಿ.ಡಿ.16 ಎಂದು ಗುರುತಿಸಲಾಯಿತು.

2) ಸದರಿ ನಿ.ಪಿ.48 ದಾಖಲೆ ಪ್ರಕಾರ ನಾವು 4 ಜನ ಅಣ್ಣ ತಮ್ಮಂದಿರು ಒಟ್ಟಾಗಿ ಕೆನೆರಾ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೆವು ಎಂದರೆ ಸರಿ. ಸದರಿ ಬ್ಯಾಂಕ್ ನಿಂದ ಪಡೆದ ಸಾಲದ ಹಣ 1ನೇ ಪ್ರತಿವಾದಿ ನನ್ನ ಅಣ್ಣನ ಕೈಯಲ್ಲಿ ಹೋಗಿತ್ತು. ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯ ಪೈಕಿ ಕೆಲವು ಆಸ್ತಿಗಳನ್ನು ನಾವು ಚಿಕ್ಕಬೂದಲಪ್ಪನವರ ಮಗ ಗಂಗಿರೆಡ್ಡಿ ಎಂಬುವರಿಗೆ ನಿ.ಪಿ.29 ದಾಖಲೆ ಪ್ರಕಾರ ಮಾರಾಟ ಮಾಡಿದ್ದೇವೆ ಎಂದರೆ ಸರಿ.

3) ನಿ.ಪಿ.29 ಖರೀದಿ ಪತ್ರದ ದೃಢೀಕೃತ ನಕಲಿನಲ್ಲಿರುವ ಸಾಕ್ಷಿದಾರರ ಸಹಿ ಮತ್ತು ಫೋಟೋವನ್ನು ಅವರು ನೋಡಿ ಗುರುತಿಸುತ್ತಾರೆ. ಸದರಿ ಆಸ್ತಿ ಮಾರಾಟ ಮಾಡಿದ ಬಳಿಕ ಬಂದ ಹಣವನ್ನು ಕೂಡ ನನ್ನ ಅಣ್ಣ ನಾರಾಯಣಸ್ವಾಮಿಯೇ ಪಡೆದಿದ್ದಾನೆ. ಸದರಿ ಆಸ್ತಿ ಮಾರಾಟ ಮಾಡಲು ಗಂಗಿರೆಡ್ಡಿ ಜೊತೆ ಮಾತುಕತೆಯನ್ನು ನನ್ನ ಅಣ್ಣ ನಾರಾಯಣಸ್ವಾಮಿಯೇ ಮಾಡಿರುತ್ತಾನೆ.

**4**) ನಿ.ಪಿ.**29** ಖರೀದಿ ಪತ್ರ ಆದ ಸಮಯದಲ್ಲಿ ಮತ್ತು ನಿ.ಪಿ.**48** ಸಾಲ ಪಡೆಯುವ ಕಾಲಕ್ಕೆ ನಾವು ಎಲ್ಲರೂ ಒಟ್ಟಾಗಿ ಇದ್ದೆವು ಎಂದರೆ ಸರಿ. ನಮ್ಮ ಅಣ್ಣ ತಮ್ಮಂದಿರ ಪೈಕಿ ಕೇವಲ **1**ನೇ ಪ್ರತಿವಾದಿ ನಾರಾಯಣಸ್ವಾಮಿ ವಿದ್ಯಾಭ್ಯಾಸ ಮಾಡಿರುತ್ತಾರೆ, ಉಳಿದವರು ನಾವು ಅನಕ್ಷರಸ್ಥರಾಗಿದ್ದೇವೆ. ಕೆಲವು ಕಂದಾಯ ದಾಖಲೆಗಳನ್ನು ನೀವು ಬೇರೆ ಬೇರೆ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೌದು, ಸರ್ಕಾರದಿಂದ ಸಬ್ಸಿಡಿ ಪಡೆಯಲು ನಾವು ಪಹಣಿ ಪತ್ರಿಕೆಗಳನ್ನು ಬೇರೆ ಬೇರೆ ಹೆಸರಿನಲ್ಲಿ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

**5**) ನನ್ನ ಅಣ್ಣ ನಾರಾಯಣಸ್ವಾಮಿ ರೇಷ್ಮೆ ಕೃಷಿ ಮತ್ತು ವ್ಯವಸಾಯ ಮಾಡುತ್ತಾನೆ. ನನ್ನ ಅಣ್ಣ ಯಾವತ್ತೂ ಕೂಡ ಬಂಡೆ ಕೆಲಸ ಮಾಡುತ್ತಿರಲಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸರ್ವೇ ನಂಬರ್ **28** ನನ್ನ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಬರೆಸಿದ್ದೇನೆಂದರೆ ಸರಿಯಲ್ಲ. ನನ್ನ ಯಾವುದೇ ಬಂಗಾರದ ಆಭರಣಗಳನ್ನು ನಾನು ಮಾರಾಟ ಮಾಡಿಲ್ಲ ಮತ್ತು ಅದರಿಂದ ಬಂದ ಹಣದಿಂದ ಸರ್ವೇ ನಂಬರ್ **28** ಜಮೀನು ನಾನು ಖರೀದಿಸಿಲ್ಲ ಎಂದರೆ ಸರಿಯಲ್ಲ. ನಾನು ಬಂಗಾರ ಮಾರಾಟ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರುತ್ತಾರೆ, ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.